ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳು).—

ಅ) ಶಿಖರ,

ಆ) ಕುಮಟಾ — ೧
ಕಾರವಾರ — ೧೨
ಶಿರಸಿ — ೪
ಮಾಗೋಡು — ೨
ಚಿತಗೋಳ — ೧
ಹೊನ್ನಾವರ — ೧
ಅಂಬಿಕಾನಗರ — ೧
ಯಲ್ಲಾಪುರ — ೧
ದಾಂಡೇಲಿ — ೩
ತಟ್ಟಿಹಳ್ಳಿ — ೧

ಒಟ್ಟು — ೨೭

ನ್ಯಾಯ ಬೆಲೆ ಅಂಗಡಿಗಳಿಗೆ ಪರವಾನಿಗೆಗಳನ್ನು ನೀಡುವುದು

೧೬೦೨. ಶ್ರೀ ಸಿ.ಪಿ. ಮೂಡಲ ಗಿರಿಯಪ್ಪ (ಶಿರಾ).— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನ್ಯಾಯ ಬೆಲೆ ಅಂಗಡಿಗಳಿಗೆ ಪರವಾನಿಗೆ ಕೊಡಲು ಸರ್ಕಾರವು ಅನುಸರಿಸುತ್ತಿರುವ ನೀತಿ ಏನು?

ಆ) ಜಿಲ್ಲಾ ಪರಿಷತ್ತುಗಳಿಗೆ ಪರವಾನಿಗೆ ನೀಡಲು ನಿರ್ದಿಷ್ಟವಾದ ಆದೇಶ ನೀಡಲಾಗಿದೆಯೇ?

ಇ) ಶಿರಾ ತಾಲ್ಲೂಕು ಪುಟಿಗನ ಹಳ್ಳಿಯಲ್ಲಿ ದಯಾನಂದ ಸಾಗರ್ ಎಂಬುವನ ಮೇಲೆ ನೀತಿ ನಿಯಮಗಳ ಉಲ್ಲಂಘನೆಯಿಂದಾಗಿ ಅಧಿಕಾರಿಗಳು ಆಪಾದನೆ ಮಾಡಿ ವಿತರಣೆಯನ್ನು ತಡೆ ಹಿಡಿದಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈತನ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮ ಏನು?

ಈ) ನೂರೈವತ್ತು ಕಾರ್ಡುದಾರರಿಗೆ ಒಂದು ನ್ಯಾಯ ಬೆಲೆ ಅಂಗಡಿಯನ್ನು ತೆರೆಯಲು ಲೈಸನ್ಸ್ ನೀಡುವುದು ಸರ್ಕಾರದ ನೀತಿಗೆ ಅನುಸಾರವಾಗಿದೆಯೇ ಹಾಗಿಲ್ಲದೆ ಇದ್ದಲ್ಲಿ ಶಿರಾ ತಾಲ್ಲೂಕು ಮಾನಂಗಿಯಲ್ಲಿ ಜಿಲ್ಲಾ ಪರಿಷತ್ತು ಸದಸ್ಯರ ಸಹೋದರನಿಗೆ ಲೈಸನ್ಸ್ ಕೊಟ್ಟಿರುವುದರ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಮಂತ್ರಿಗಳು).—

ಅ) ನ್ಯಾಯ ಬೆಲೆ ಅಂಗಡಿಗೆ ಪರವಾನಗಿಯನ್ನು ಕೊಡಲು ಸರ್ಕಾರವು ಈ ಕೆಳಕಂಡ ನೀತಿಯನ್ನು ಅನುಸರಿಸುತ್ತಿದೆ.

೧) ನ್ಯಾಯ ಬೆಲೆ ಅಂಗಡಿಗೆ ಕನಿಷ್ಟ ೫೦೦ ಪಡಿತರ ಚೀಟಿಗಳನ್ನು ನಿಯೋಜಿಸಬೇಕು.

೨) ಒಂದಕ್ಕಿಂತ ಹೆಚ್ಚು ಹಳ್ಳಿಗಳಿಗೆ ಕೂಡಿ ಒಂದು ನ್ಯಾಯ ಬೆಲೆ ಅಂಗಡಿಯಿದ್ದಲ್ಲಿ ಹಳ್ಳಿ ಮತ್ತು ನ್ಯಾಯಬೆಲೆ ಅಂಗಡಿಯಂ ನಡುವಣ ದೂರವು ೩ ಕಿ.ಮೀ. ಮೀರಿರಬಾರದು.

೩) ನ್ಯಾಯ ಬೆಲೆ ಅಂಗಡಿ ವಂಜೂರು ಮಾಡಲು ಸಹಕಾರ ಸಂಘ ಮಹಿಳಾ ಮಂಡಳ ಮತ್ತು ಇತರೆ ಸಂಘ ಸಂಸ್ಥೆಗಳಿಗೆ ಆದ್ಯತೆ ನೀಡಬೇಕು.

೪) ನಗರ ಪ್ರದೇಶಗಳಲ್ಲಿ ಖಾಸಗೀಯವರಿಗೆ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಬಾರದು. ಈ ಆಜ್ಞೆ ದಿನಾಂಕ ೧೫-೮-೧೯೮೬ರಿಂದ ಜಾರಿಯಲ್ಲಿದೆ.

ಅ) ನೀಡಲಾಗಿದೆ,

ಇ) ಬಂದಿದೆ.

ನ್ಯಾಯ ಬೆಲೆ ಅಂಗಡಿಗೆ ಆಹಾರ ಧಾನ್ಯದ ಹಂಚಿಕೆಯನ್ನು ನಿಲ್ಲಿಸಲಾಗಿತ್ತು.

ಈ) ಇಲ್ಲ. ಜಿಲ್ಲಾ ಪರಿಷತ್ತಿಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ರೇಷ್ಮೆ ಇಲಾಖಾ ಸಚಿವರು). — ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಮತ್ತು ಉತ್ತರಗಳ ಮೂರವತ್ತನೆಯ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು. — ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

ರಾಜ್ಯದಲ್ಲಿ ನಡೆದಿರುವ ದರೋಡೆಗಳ ಬಗ್ಗೆ

೧೫೩೮. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ). — ಮಾನ್ಯ ಪಂಚಾಯತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ನಡೆದಿರುವ ಮನೆ ಮತ್ತು ರಸ್ತೆ ದರೋಡೆಗಳ ಸಂಖ್ಯೆ ಎಷ್ಟು ?

ಆ) ಇದರಲ್ಲಿ ಎಷ್ಟು ಪ್ರಕರಣಗಳು ಪತ್ತೆಯಾಗಿವೆ ಮತ್ತು ಎಷ್ಟು ಮಂದಿ ದಸ್ತಗಿರಿಯಾಗಿದ್ದಾರೆ ?

ಇ) ಪತ್ತೆಯಾದ ಪ್ರಕರಣಗಳಲ್ಲಿ ಸರ್ಕಾರವು ವಶಪಡಿಸಿಕೊಂಡಿರುವ ವಸ್ತುಗಳ ಮೌಲ್ಯವೆಷ್ಟು ಮತ್ತು ದರೋಡೆಗಾರರುಗಳ ಮೇಲೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಪಂಚಾಯತ್ ಮಂತ್ರಿಗಳು). —

ಅ) ವಿವರಗಳು ಕೆಳಕಂಡಂತಿವೆ

ವರ್ಷ	ದರೋಡೆಗಳು	
	ಮನೆ	ರಸ್ತೆ
೧೯೮೫	೯೪	೩೫
೧೯೮೬	೧೨೫	೪೭
೧೯೮೭	೧೦೭	೩೭

ಆ)

ವರ್ಷ	ಪತ್ತೆಯಾದವು		ದಸ್ತಗಿರಿಯಾದವರು	
	ಮನೆ	ರಸ್ತೆ	ಮನೆ	ರಸ್ತೆ
೧೯೮೫	೪೯	೨೪	೨೫೭	೩೦೬
೧೯೮೬	೬೬	೨೧	೨೧೮	೧೪೬
೧೯೮೭	೬೪	೧೯	೨೪೬	೯೦